ಮೂಲ ದಾವಾ ಸಂಖ್ಯೆ. 248/2016 ಪಿ ಡಬ್ಲ್ಯೂ 1

(ದಿನಾಂಕ 13-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಕೆ ಪಿ ಕೆ ವಕೀಲರಿಂದಃ-

ನಾನು ಎಸ್ ಎಸ್ ಎಲ್ ಸಿ ವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ದಾವಾಸ್ತಿ ಪ್ಲಾಟ್ ನಂ.105 ಇರುತ್ತದೆ. ಅದರ ವಿಸ್ತೀರ್ಣ 30 )( 40 ಅಡಿ ಇದೆ. ದಾವಾಸ್ತಿಯ ಚಕ್ಕುಬಂದಿ ಪೂಃಚೌಟದ ಎಲ್ಲಪ್ಪ ಇವರ ಸ್ವತ್ತು, ಪಃ ಅಡಿವೆಪ್ಪ ಇವರ ಸ್ವತ್ತು, ಉಃ ಸರ್ಕಾರಿ ರಸ್ತೆ ಹಾಗೂ ದಃ ಖಾಲಿ ಜಾಗ ಇರುತ್ತದೆ. ದಾವಾಸ್ತಿಯ ಪೂರ್ವ ಮತ್ತು ಪಶ್ಚಿಮಕ್ಕೆ ಇರುವ ಸ್ವತ್ತುಗಳ ನಂಬರು ನನಗೆ ಹೇಳಲು ಬರುವುದಿಲ್ಲ, ದಕ್ಷಿಣಕ್ಕೆ ಸರ್ಕಾರಿ ಜಾಗ ಇರುತ್ತದೆ. ನಾನು ದಾವಾಸ್ತಿಯನ್ನು ಸುಧಾಬಾಯಿ ಇವರಿಂದ ಖರೀದಿ ಮಾಡಿದ್ದೇನೆ. ಅವರು ಅದನ್ನು ಭಜಂತ್ರಿ ಹುಲುಗಪ್ಪ ಇವರಿಂದ ಖರೀದಿ ಮಾಡಿದ್ದರು. ಭಜಂತ್ರಿ ಹುಲುಗಪ್ಪ ಇವರಿಗೆ ಸದರಿ ಸ್ವತ್ತು ಹೇಗೆ ಬಂದಿತ್ತು ಎಂದು ನನಗೆ ಗೊತ್ತಿಲ್ಲ. ದಾವಾಸ್ತಿಯು ಅಸ್ತಿತ್ವದಲ್ಲಿರುವುದಿಲ್ಲವೆಂದರೆ ಸರಿಯಲ್ಲ.

ಭಜಂತ್ರಿ ಹುಲುಗಪ್ಪ ಇವರು ಸನ್ 1997-98 ರಲ್ಲಿ ಹಂಪಸಾಗರ ಗ್ರಾಮ ಪಂಚಾಯ್ತಿಯ ಅಧ್ಯಕ್ಷರಾಗಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿಯವರು ತನ್ನ ಅಧಿಕಾರಾವಧಿಯಲ್ಲಿ ತನ್ನ ಹೆಂಡತಿಯಾದ ಹುಲಿಗೆಮ್ಮರವರ ಹೆಸರಿಗೆ ಒಂದು ಪಂಚಾಯ್ತಿ ಆಸ್ತಿಯನ್ನು ಪಂಚಾಯ್ತಿ ದಾಖಲೆಗಳಲ್ಲಿ ಬರೆಯಿಸಿ ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡಿದ್ದ ಎಂದರೆ ನನಗೆ ಗೊತ್ತಿಲ್ಲ. ಹುಲುಗಮ್ಮ ಇವರ ಹೆಸರಿಗೆ ಮಾಡಿಕೊಂಡ ದಾಖಲೆಗಳಾಧಾರದ ಮೇಲೆ ಹುಲುಗಪ್ಪ ಇವನು ತನ್ನ ಹೆಸರಿಗೆ ಖರೀದಿ ಪತ್ರವನ್ನು ಮಾಡಿಕೊಂಡಿರುತ್ತಾನೆಂದರೆ ನನಗೆ ಗೊತ್ತಿಲ್ಲ. ದಾವಾಸ್ತಿಯು ಅಸ್ತಿತ್ವದಲ್ಲಿರುವುದಿಲ್ಲ ಆದರೆ ದಾಖಲೆಗಳನ್ನು ಹುಲುಗಪ್ಪ ಮತ್ತು ಹುಲಿಗೆಮ್ಮ ಇವರು ಸೃಷ್ಟಿ ಮಾಡಿಕೊಂಡಿರುತ್ತಾರೆಂದರೆ ನನಗೆ ಗೊತ್ತಿಲ್ಲ.

ಹಂಪಸಾಗರ-2 ಗ್ರಾಮ ಟಿ ಬಿ ಡ್ಯಾಂ ನಿರ್ಮಾಣವಾದಾಗ ಸ್ಥಳಾಂತರವಾದ ಗ್ರಾಮ ಎಂದರೆ ಸರಿ. ಆ ಸಮಯದಲ್ಲಿ ಮನೆ ಮತ್ತು ಆಸ್ತಿಗಳನ್ನು ಕಳೆದುಕೊಂಡವರಿಗೆ ನಿವೇಶನಗಳ ಕುರಿತು ಪಟ್ಟಾ ಹಂಚಿಕೆ ಮಾಡಿದ್ದರು ಎಂದರೆ ಸರಿ. ದಿಃ04-12-1956 ರಂದು ನಿವೇಶನಗಳನ್ನು ನಿರ್ಮಾಣ ಮಾಡಿ ಅದನ್ನು ಫಲಾನುಭವಿಗಳಿಗೆ ಸರ್ಕಾರದವರು ಹಂಚಿ ಪಟ್ಟಾ ನೀಡಿರುತ್ತಾರೆಂದರೆ ನನಗೆ ಮಾಹಿತಿ ಇಲ್ಲ. ಮೇಲೆ ಹೇಳಿದ ಚಕ್ಕುಬಂದಿಯಲ್ಲಿರುವ ಜಾಗವನ್ನು ಸರ್ಕಾರದವರು ಗೋಡೌನ್ ಪ್ಲಾಟ್ ಅಂತಾ ಹಂಚಿಕೆ ಮಾಡಿರುತ್ತಾರೆಂದರೆ ನನಗೆ ಮಾಹಿತಿ ಇಲ್ಲ. ಗೋಡೌನ್ ಪ್ಲಾಟ್ ನಂ.29 ನ್ನು ಹುಂಡೇಕರ್ ಕರಬಸಮ್ಮ ಕೋಂ ಚನ್ನಪ್ಪ ಇವರಿಗೆ ಮಂಜೂರು ಮಾಡಿ ಪಟ್ಟಾ ನೀಡಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಅದರ ವಿಸ್ತೀರ್ಣ 45 )( 70 ಅಡಿ ಇರುತ್ತದೆಂದರೆ ನನಗೆ

ಗೊತ್ತಿಲ್ಲ. ಅಲ್ಲಿರುವಂತಹ ಎಲ್ಲಾ ಪ್ಲಾಟುಗಳ ವಿಸ್ತೀರ್ಣ 45 )( 70 ಅಡಿ ಇರುತ್ತವೆಂದರೆ ನನಗೆ ಗೊತ್ತಿಲ್ಲ. ಹುಂಡೇಕಾರ್ ಕರಿಬಸಮ್ಮ ಇವರ ಹೆಸರಿಗೆ ಪಂಚಾಯ್ತಿ ದಾಖಲೆಗಳಲ್ಲಿ ಹೆಸರು ದಾಖಲಾಗಿ ಅವರು ಸರ್ಕಾರಕ್ಕೆ ತೆರಿಗೆ ಸಹಾ ಪಾವತಿಸುತ್ತಾ ಬಂದಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಸದರಿ ಹುಂಡೇಕಾರ್ ಕರಿಬಸಮ್ಮ ಇವರಿಂದ ಚಂದ್ರಮ್ಮ ಇವರು ಸದರಿ ಪ್ಲಾಟನ್ನು ಖರೀದಿ ಮಾಡಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಸದರಿ ಆಸ್ತಿಯಲ್ಲಿ ಅರ್ಧ ಭಾಗವನ್ನು ರೆಡ್ಡಿನಾಯ್ಕ ಇವರಿಗೆ ಮತ್ತು ಇನ್ನರ್ಧ ಭಾಗವನ್ನು ದೇವಿಬಾಯಿ ಇವರಿಗೆ ಚಂದ್ರಮ್ಮ ಇವರು ಮಾರಾಟ ಮಾಡಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಸದರಿ ರೆಡ್ಡಿನಾಯ್ಕ ಮತ್ತು ದೇವಿಬಾಯಿ ಇವರು ಸದರಿ ಆಸ್ತಿಗಳ ಕುರಿತು ಹದ್ದುಬಸ್ತನ್ನು ಮಾಡಿಸಿ ಪಂಚಾಯ್ತಿ ದಾಖಲೆಗಳಲ್ಲಿ ತನ್ನ ಹೆಸರುಗಳನ್ನು ದಾಖಲಿಸಿಕೊಂಡು ತೆರಿಗೆ ಪಾವತಿಸುತ್ತಾ ಬಂದಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಇವತ್ತಿಗೂ ಸಹಾ ರೆಡ್ಡಿನಾಯ್ಕ ಮತ್ತು ದೇವಿಬಾಯಿ ಸದರಿ ಪ್ಲಾಟುಗಳ ಸ್ವಾಧೀನದಲ್ಲಿರುತ್ತಾರೆಂದರೆ ನನಗೆ ಗೊತ್ತಿಲ್ಲ. ದಾವಾಸ್ತಿ ಅಸ್ತಿತ್ವದಲ್ಲಿರುವುದಿಲ್ಲ, ದಾವಾಸ್ತಿಗಳ ಕುರಿತು ಪತ್ರ ವ್ಯವಹಾರ ಮಾತ್ರ ನಡೆದಿರುತ್ತವೆ ಅದನ್ನು ನೋಡಿ ನಾನು ಆಸ್ತಿಯನ್ನು ಖರೀದಿಸಿರುತ್ತೇನೆಂದರೆ ಸರಿಯಲ್ಲ. ದಾವಾಸ್ತಿಗೆ ಸಂಬಂಧಿಸಿದಂತೆ ಸುಧಾಬಾಯಿ ಮತ್ತು ಹುಲಿಗೆಮ್ಮ ಇವರ ಹೆಸರಿನಲ್ಲಿ ಯಾವುದೇ ಮೂಲ ದಾಖಲೆಗಳಿರುವುದಿಲ್ಲವೆಂದರೆ ಸರಿಯಲ್ಲ. ಆಸ್ತಿ ಇಲ್ಲದಿದ್ದರೂ ಸಹಾ ದಾಖಲಾತಿಗಳನ್ನು ಸೃಷ್ಟಿ ಮಾಡಿ ಖರೀದಿ ಪತ್ರಗಳನ್ನು ಅವರು ಸೃಷ್ಟಿ ಮಾಡಿರುತ್ತಾರೆಂದರೆ ಸರಿಯಲ್ಲ. ಪ್ರತಿವಾದಿಯು ತನ್ನ ಆಸ್ತಿಯ ಸ್ವಾಧೀನದಲ್ಲಿದ್ದರೂ ಸಹಾ ಅವನಿಗೆ ತೊಂದರೆ ಕೊಡಲು ಸುಳ್ಳು ದಾವೆಯನ್ನು ಸಲ್ಲಿಸಿ ಸುಳ್ಳು ಸಾಕ್ಷಿ ಪ್ರಮಾಣಪತ್ರವನ್ನು ಹಾಜರುಪಡಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ